ಓ.ಎಸ್. ನಂ.131/2019 ರಲ್ಲಿ
ಪಿ.ಡಬ್ಲ್ಯೂ-2(ಹನುಮಯ್ಯ)

ದಿನಾಂಕ 20.07.2024 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1ನೇ ಪ್ರತಿವಾದಿ ಪರ ಶ್ರೀ ಎ.ಎಸ್., ವಕೀಲರಿಂದಃ-

ನನ್ನ ವಾಸ ಚನ್ನಮಾನಹಳ್ಳಿಯಲ್ಲಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಈ ದಾವೆಯನ್ನು ಈಶ್ವರಯ್ಯನ ಮೇಲೆ ಹುಚ್ಚೇಗೌಡರ ಮಗ ನಾರಾಯಣಪ್ಪ ಹಾಕಿದ್ದಾರೆ. ಅವರೊಬ್ಬರ ಮೇಲೆ ಮಾತ್ರ ಕೇಸು ಹಾಕಿದ್ದಾರೆ. ಬೇರೆ ಯಾರ ಮೇಲೆ ಹಾಕಿದ್ದಾರೆಂದು ಮಾಹಿತಿ ಇಲ್ಲ. ಈ ಕೇಸನ್ನು ಬೇರೆ ಇನ್ಯಾರು ಸೇರಿ ಹಾಕಿದ್ದಾರೆ ಎಂದು ಗೊತ್ತಿಲ್ಲ. ದಾವಾ ಸ್ವತ್ತಿನ ಸರ್ವೇ ನಂ.96/2 1 ಎಕರೆ 33 ಗುಂಟೆ. ಈ ದಾವೆಯನ್ನು ಎಷ್ಟು ಆಸ್ತಿಗಳ ಸಂಬಂಧ ಹಾಕಿದ್ದಾರೆಂದು ಗೊತ್ತಿಲ್ಲ. ಈ ಕೇಸಿನಲ್ಲಿ ಸಾಕ್ಷಿ ಹೇಳಲು ನನ್ನನ್ನು ನಾರಾಯಣಪ್ಪ ಕರೆದುಕೊಂಡು ಬಂದಿದ್ದಾರೆ. ಅವರು ಈ ರೀತಿ ಹೇಳಬೇಕೆಂದು ನನಗೆ ಹೇಳಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಸರ್ವೇ ನಂಬರ್‌ನಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದರೆ ಸಾಕ್ಷಿಯು 1 ಎಕರೆ 33 ಗುಂಟೆ ಎಂದು ನುಡಿಯುತ್ತಾರೆ. ಈ ದಾವೆಯನ್ನು 1 ಎಕರೆ 33 ಗುಂಟೆಗೂ ಹಾಕಿದ್ದಾರೆ.

2. ನಾನು 1ನೇ ವಾದಿ ಪುಟ್ಟಸ್ವಾಮಯ್ಯರವರ ಅಕ್ಕನ ಮಗ ಎಂದರೆ ಸರಿಯಲ್ಲ. ನಾನು ನಾರಾಯಣಪ್ಪನವರ ಅಕ್ಕನ ಮಗ. ಸಾಕ್ಷಿಯು ಮುಂದುವರೆದು ಇಬ್ಬರೂ ಸಂಬಂಧಿಕರೇ ಎಂದು ನುಡಿಯುತ್ತಾರೆ. ಹುಚ್ಚೇಗೌಡರಿಗೆ 7 ಜನ ಮಕ್ಕಳು. ಅವರೆಂದರೆ ದುಂಡಮ್ಮ, ಪುಟ್ಟಸ್ವಾಮಯ್ಯ, ಚನ್ನೇಗೌಡ, ಕೃಷ್ಣಪ್ಪ, ಜಯಮ್ಮ, ನಾರಾಯಣಗೌಡ ಮತ್ತು ಮಾಯಮ್ಮ. ನಾನು ವಾದಿಗಳಿಗೆ ಸಂಬಂಧಿಯಾಗಿರುವುದರಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ.

3. ನನಗೆ ದೊಡ್ಡಚನ್ನೇಗೌಡರ ಮಗ ಮಾಯಣ್ಣ ಗೊತ್ತು. ಮಾಯಣ್ಣನವರಿಂದ ದಾವಾ ಬಿ ಷೆಡ್ಯೂಲ್ ಸ್ವತ್ತನ್ನು ಮನಾರಿಗೌಡರ ಮಗ ಮಾಯಣ್ಣ ಅಲಿಯಾಸ್ ಮೋಟಪ್ಪರವರು ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಅವರು ಕ್ರಯಕ್ಕೆ ಪಡೆದುಕೊಂಡಾಗಿನಿಂದ ಅವರೇ ಸ್ವಾಧೀನದಲ್ಲಿದ್ದು ಖಾತೆ, ಪಹಣಿ ಅವರ ಹೆಸರಿಗೆ ಆಗಿತ್ತು ಎಂದರೆ ಸರಿಯಲ್ಲ. ಅಣ್ಣ ತಮ್ಮಂದಿರ ವಿಭಾಗದಲ್ಲಿ ದಾವಾ ಬಿ ಷೆಡ್ಯೂಲ್ ಸ್ವತ್ತು 1ನೇ ಪ್ರತಿವಾದಿಯ ಭಾಗಕ್ಕೆ ಬಂತು ಎಂದರೆ ಸರಿಯಲ್ಲ. ವಿಭಾಗದಂತೆ 1ನೇ ಪ್ರತಿವಾದಿಯ ಹೆಸರಿಗೆ ಸದರಿ ಆಸ್ತಿಯ ಖಾತೆ ಆಗಿದೆ ಎಂದರೆ ಸಾಕ್ಷಿಯು ದಬ್ಬಾಳಿಕೆಯಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಬಿ ಷೆಡ್ಯೂಲ್ ಸ್ವತ್ತಿನ ಖಾತೆ ಪೋಡಿಯಂತೆ 1ನೇ ಪ್ರತಿವಾದಿಯ ಹೆಸರಿಗೆ ಖಾತೆ ಬರುತ್ತಿದೆ ಎಂದರೆ ಸಾಕ್ಷಿಯು ದಬ್ಬಾಳಿಕೆಯಿಂದ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

4. ಕ್ರಯದ ವ್ಯವಹಾರ, ವಿಭಾಗ ಆಗಿರುವ ವ್ಯವಹಾರ ಎಲ್ಲವೂ ನನಗೆ ಗೊತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲ, ಅವರ ಮನೆಯ ವಿಚಾರ, ವೈಯಕ್ತಿಕ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ವಾದಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ರಿಂದ 4ನೇ ಪ್ರತಿವಾದಿಗಳು ಎಷ್ಟು ವರ್ಷಗಳ ಹಿಂದೆ ಒತ್ತುವರಿ ಮಾಡಿದ್ದಾರೆ ಎಂದರೆ ಸಾಕ್ಷಿಯು 30 ವರ್ಷಗಳಿಂದ ಒತ್ತುವರಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. 1968 ರಲ್ಲಿ ಕ್ರಯ ಆದಾಗಿನಿಂದಲೂ ಪ್ರತಿವಾದಿಗಳ ಕುಟುಂಬದವರು

ಸ್ವಾಧೀನದಲ್ಲಿದ್ದು ಈಗ 1ನೇ ಪ್ರತಿವಾದಿಯೇ ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಆಗಿದ್ದಲ್ಲಿ ಮೊದಲೇ ಮಾಡಿಕೊಳ್ಳಬಹುದಿತ್ತು ಎಂದು ನುಡಿಯುತ್ತಾರೆ. 1968 ರಲ್ಲೇ ಕ್ರಯದಂತೆ ಖಾತೆ ಆಗಿದೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ವಾದಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಲೋಕೇಶ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.